**(ದಿನಾಂಕಃ 14-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ವಾಟಿ ಸವಾಲು: ಪ್ರತಿವಾದಿ ಪರ ಶ್ರೀ ಎ ಎಂ ಎ ವಕೀಲರಿಂದ -**

**1.** ನನ್ನ ಅಜ್ಜ ಲಗಮಾ ಲಕ್ಷ್ಮಣ ಹುಗ್ಗಿ ಯೂವಾಗ ತೀರಿಕೊಂಡಿದ್ದಾರೆ ಎಂದು ನನಗೆ ದಿನಾಂಕ ನಿಖರವಾಗಿ ನೆನಪಿಲ್ಲ. ನನಗೆ ಈಗ **60** ವರ್ಷ ವಯಸ್ಸು . ನಾನು ನಮ್ಮ ಅಜ್ಜನನ್ನು ನೋಡಿರುವುದಿಲ್ಲ. ನಾನು ಹುಟ್ಟುವ ಮುಂಚೆಯೇ ನಮ್ಮ ಅಜ್ಜ ತೀರಿಕೂಂಡಿರುತ್ತಾರೆ. ನನ್ನ ಅಜ್ಜ ಸತ್ತ ನಂತರ ಲಕ್ಕವ್ವಾ, ಲಕ್ಷ್ಮಿಬಾಯಿ , ಶಿವತಾಯಿ ತಮ್ಮ ಹಕ್ಕನ್ನು ಉಳಿದ ಅಣ್ಣ ತಮ್ಮಂದಿರರಿಗೆ ಬಿಟ್ಟು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದರೆ ಹೊಳೆಯಪ್ಪ , ಲಕ್ಕಪ್ಪ , ಬಾಳಪ್ಪ ಇವರ ಹೆಸರು ಮಾತ್ರ ಉತಾರದಲ್ಲಿದೆ ಎಂದರೆ ನಿಜ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನ ಹೆಸರು ಎಂ ಆರ್ ನಂ. **1410** ದಿನಾಂಕ **17-4-1962** ರ ಪ್ರಕಾರ ದಾಖಲ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಡ್ಯೆರಿ ನಂ. **1410** ನಾನು ಅಥವಾ ನನ್ನ ಅಣ್ಣ ತಮ್ಮಂದಿರರು ಬೇರೆ ಎಲ್ಲಿಯೂ ಪ್ರಶ್ನೆ ಮಾಡಿಲ್ಲ. **2017** ರಲ್ಲಿ ನನ್ನ ಅತ್ತೆಯಂದಿರರಾದ ಲಕ್ಕವ್ವಾ, ಲಕ್ಷ್ಮಿಬಾಯಿ , ಶಿವತಾಯಿ ಇವರು ಪಾಲುಕೋರಿ ನನ್ನ ತಂದೆಯನ್ನು ಕೇಳಿದರು. **2017** ರಲ್ಲಿ ಲಕ್ಕವ್ವಾ ಮತ್ತು ಲಕ್ಷ್ಮಿಬಾಯಿ ಜೀವಂತ ಇರಲಿಲ್ಲ ಎಂದರೆ ನಿಜ . ನನ್ನ ಅತ್ತೆಯ ಮಕ್ಕಳು ಈ ದಾವೆಯಲ್ಲಿ ತಕರಾರು ಹಾಕಿ ನಮಗೂ ಪಾಲು ಕೊಡಿ ಎಂದು ಕೇಳಿದ್ದಾರೆ . ಆ ತಕರಾರನ್ನು ನಾನು ನೋಡಿಲ್ಲ. ನಮ್ಮ ಅತ್ತೆಯ ಮಕ್ಕಳು ಈ ದಾವೆಯಲ್ಲಿ ಪಾಲು ಕೇಳಿ ತಕರಾರು ಹಾಕಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**2.** ಪ್ರತಿವಾದಿ ನಂ. **11** ಮತ್ತು **12** ಖರೀದಿ ಮಾಡಿದ್ದರ ಮೇರೆಗೆ ಸದರಿ ಖರೀದಿಯನ್ನು ಪ್ರಶ್ನಿಸಿ ಪ್ರಥಮ ಪ್ರಾಶಸ್ಯ ಹಕ್ಕನ್ನು ಕೋರಿ ನಾನು ದಾವೆ ಮಾಡಿದ್ದೇನೆ. ಮ್ಯೂಟೇಶನ ಚಾಲೆಂಜ ಮಾಡಿ ಎಸಿ ಬೆಳಗಾವಿ ಹಾಗೂ ಡಿಸಿ ಬೆಳಗಾವಿ ಇವರಲ್ಲಿ ಪ್ರಶ್ನೆ ಮಾಡಿದ್ದೇನೆ. ಮಾರುಕಟ್ಟೆ ಬೆಲೆ ಕೊಟ್ಟು ನಾನು ಖರೀದಿ ಮಾಡುತ್ತೇನೆ ಎಂದು ನಾನು ಯಾವುದೇ ದಾವೆ ಮಾಡಿಲ್ಲ. ಸದರಿ ಖರೀದಿ ಪತ್ರ ನನ್ನ ಮೇಲೆ ಬಂಧನಕಾರಿ ಇಲ್ಲ ಎಂದು ನಾನು ಮಾತ್ರ ದಾವೆ ಮಾಡಿದ್ದೇನೆ ಎಂದರೆ ನಿಜ. ಯಾವ ತಾರೀಖಿನಂದು ಈ ದಾವೆ ಮಾಡಲು ಕಾರಣ ಉಂಟಾಯಿತು ಎಂದು ನನಗೇ ಹೇಳಲು ಬರುವುದಿಲ್ಲ , ಆದರೆ **2017** ರಲ್ಲಿ ಈ ದಾವೆ ಮಾಡಿದ್ದೇನೆ.

**3.** ಈ ದಾವಾ ಆಸ್ತಿಯಲ್ಲಿ **1/6** ಹಿಸ್ಸೆ ನನಗೆ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಈ ದಾವೆಯಲ್ಲಿ **1/3** ಹಿಸ್ಸಾ ಇದೆ ಎಂದರೆ ಸರಿಯಲ್ಲ . ದಿನಾಂಕ **22-10-2017** ರಂದು ಹಿರಿಯರು ಕೂಡಿದ್ದರು, ಆಗ ವಂದನಾ ಮತ್ತು ಇಂದಿರಾವತಿ ಬಂದು ತಕರಾರು ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾದಪತ್ರದ ಪ್ಯಾರಾ ನಂ. **6** ರಲ್ಲಿ ಬರೆದಂತಹ ವಿಚಾರ ನಾನು ದಿನಾಂಕ **22-10-2017** ರಂದು ಪಂಚಕಿ ಕೂಡಿಸಿದ್ದೇನೆ ಎಂದು ಬರೆದ ವಿಚಾರ ಸರಿ ಇದೆ. ಈಗಾಗಲೇ ದಾವಾಸ್ತಿ ವಾಟ್ನಿ

ಆಗಿರುವುದರಿಂದ ಪಂಚಕಿ ಕೂಡಿಸುವ ಪ್ರಮೇಯ ಇಲ್ಲ ಎಂದರೆ ಸರಿಯಲ್ಲ. ವಂದನಾ ಮತ್ತು ಇಂದಿರಾವತಿ ಇವರಿಗೆ ಅವರ ತಂದೆಯ 1/3 ಹಿಸ್ಸಾ ಅವರಿಗೆ ಈಗಾಗಲೇ ಹೋಗಿದೆ ಎಂದರೆ ಸರಿಯಲ್ಲ. ಅವರು 1/3 ಹಿಸ್ಸಾದ ಮಾಲಿಕರು ಎಂದರೆ ಇರಬಹುದು, ಆದರೆ ಇನ್ನೂ ವಾಟ್ನಿ ಆಗಿಲ್ಲ ಎಂದು ಹೇಳುತ್ತಾರೆ. ಅವರು ತಮ್ಮ 1/3 ಹಿಸ್ಸಾವನ್ನು ಯೋಗ್ಯ ಬೆಲೆಗೆ ಪ್ರತಿವಾದಿ ನಂ. 11 ಮತ್ತು 12 ಇವರಿಗೆ ಖರೀದಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅವರುಗಳು ಖರೀದಿ ಪತ್ರದ ನಾತೆಯಿಂದ ದಾವಾ ಜಮೀನಿನ ಪ್ರಾಮಾಣಿಕ ಖರೀದಿದಾರರು ಆಗಿದ್ದು ಅವರು ಪ್ರತ್ಯಕ್ಷ ಕಬಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ಅಡಿವೆಪ್ಪ , ಬಸವರಾಜ, ವಂದನಾ ಮತ್ತು ಇಂದಿರಾವತಿ ಇವರಿಗೆ ತೊಂದರೆ ಕೊಡಬೇಕೆಂದು ನಾನು ಈ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿ ಬಹು ವರ್ಷಗಳ ಹಿಂದೆ ವಾಟ್ನಿ ಆಗಿದ್ದರೂ ಸಹ ಆಗಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಣ ಪತ್ರದ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**